

ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

ನನ್ನ ಅಕ್ಕನ ಮಗಳಿಗೆ ಈಗ 21 ವರ್ಷ. ಬಿಎಸ್‌ಸಿ ಓದುತ್ತಿದ್ದಾಳೆ. ಅವಳ ತಂದೆತಾಯಿ ವಿದೇಶದಲ್ಲಿ ಶಿಕ್ಷಕರಾಗಿದ್ದಾರೆ. ಇವಳು ನಮ್ಮೊಂದಿಗಿದ್ದಾಳೆ. ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದು ಶಾಸ್ತ್ರೀಯ ನೃತ್ಯ, ನಾಟಕ ಮತ್ತು ಕ್ರೀಡೆಯಲ್ಲಿ ಹೆಸರುಗಳಿಸಿದ್ದಾಳೆ. ಇಂತಹ ಸ್ವಭಾವದ ಹುಡುಗಿ ಕಳೆದ ವರ್ಷ ಮಧ್ಯದಲ್ಲಿ ಒಂದು ದುರ್ಘಟನೆಗೆ ಸಿಕ್ಕಿಕೊಂಡಳು. ಪ್ರತಿಷ್ಠಿತ ಕಾಲೇಜಿನ ಸಾಂಸ್ಕೃತಿಕ ಸಮಾವೇಶದಲ್ಲಿ ಭಾಗವಹಿಸಲು ಇವರ ತಂಡದ ಮುಂದಾಳತ್ವ ಇವಳಿಗೆ ವಹಿಸಲಾಗಿತ್ತು. 35ರ ನುರಿತ ನೃತ್ಯ ಸಂಯೋಜಕನನ್ನು ಕಾಲೇಜಿನವರೇ ನೇಮಿಸಿಕೊಂಡು 3 ತಿಂಗಳು ತರಬೇತಿಗೆ ವ್ಯವಸ್ಥೆ ಮಾಡಿದ್ದರು. ತರಬೇತಿಯ ಸಮಯದಲ್ಲಿ ಅವನ ಮಾರ್ಗದರ್ಶನದಲ್ಲಿ ಕೆಲ ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದರು. ಹೀಗಿದ್ದಾಗ ಒಮ್ಮೆ ಆತ ಆಕೆಯನ್ನು ಮದುವೆ ಮಾಡಿಕೊ ಎಂದು ಒತ್ತಾಯಿಸಿದನಂತೆ. ಅದಕ್ಕವಳು 'ಗುರುವಿನ ಸ್ಥಾನದಲ್ಲಿರುವವರು ಹೀಗೆಲ್ಲಾ ಮಾತಾಡುವುದು ಸರಿಯಲ್ಲ. ಹಾಸ್ಯಕ್ಕೂ ಇಂತಹದ್ದನ್ನಾಡ ಬೇಡಿ' ಎಂದು ನಿಷ್ಠೂರವಾಗಿ ಹೇಳಿದ್ದಳು. ಇದಾದ ನಂತರ ಅವರಿಬ್ಬರ ಸಂಬಂಧದ ಬಗ್ಗೆ ಇಲ್ಲದ ಪುಕಾರುಗಳು ಹರಡಿತ್ತು (ಅವನೇ ಹಬ್ಬಿಸಿದ್ದ). ಇದರಿಂದ ನೊಂದ ಅವಳು ತಂಡದಿಂದ ಹೊರಬರುವುದಾಗಿ ಹೇಳಿದಳು. ಆದರೆ, ಶಿಕ್ಷಕರ ಒತ್ತಾಯದಿಂದ ಕಾರ್ಯಕ್ರಮ ಮುಗಿಯುವವರೆಗೆ ಇರುವುದಾಗಿ ಒಪ್ಪಿದಳು. ಒಂದು ಸಂಜೆ ಕಾರ್ಯಕ್ರಮಕ್ಕೆ ಸಾಮಗ್ರಿಗಳನ್ನು ಖರೀದಿಸಬೇಕಾಗಿದೆ ಜೊತೆಯಲ್ಲಿ ಬರುವಂತೆ ಕಲಾಶಿಕ್ಷಕ ಕರೆದನೆಂದು ಹೋದಳು. ಆದರೆ ಅವನೊಂದಿಗೆ ಮತ್ತಾವ ವಿದ್ಯಾರ್ಥಿಯೂ ಇರಲಿಲ್ಲ. ಹೀಗೇಕೆ ಎಂದು ವಿಚಾರಿಸಿದಾಗ ಮತ್ತೆ ಮದುವೆ ಪ್ರಸ್ತಾಪ ಮಾಡಿದ. ಪ್ರತಿಭಟಿಸಿದ್ದಕ್ಕೆ ಅವನ ಮೊಬೈಲನ್ನು ತೋರಿಸಿದ. ಇವಳು ಉಡುಪು ಬದಲಾಯಿಸುತ್ತಿರುವ ಕೆಲವು ಚಿತ್ರಗಳು ಅದರಲ್ಲಿದ್ದವು. ಅವುಗಳನ್ನು ನೋಡಿ ಭಯ, ಆತಂಕವಾಯಿತು, ಅವಮಾನ ಎಲ್ಲವೂ ಒಟ್ಟಿಗೆ ಆಯಿತು. ಅವುಗಳನ್ನು ಅಳಿಸುವಂತೆ ಅಂಗಲಾಚಿ ಬೇಡಿದರೂ ಜಗ್ಗಲಿಲ್ಲ. ಕೊನೆಗೆ ಅವರಿಬ್ಬರ ಮದುವೆಯ ನಟನೆಯನ್ನು ಮಾಡಿದರೆ ಚಿತ್ರಗಳನ್ನು ಅಳಿಸುವುದಾಗಿ ಹೇಳಿದ. ಮಾರನೆಯ ದಿವಸವೇ ಅವನ ಸ್ನೇಹಿತನೊಬ್ಬನ ಮನೆಯಲ್ಲಿ ಮದುವೆಯ ನಾಟಕವೂ ನಡೆಯಿತು. ಅದರ ಫೋಟೋ ತೆಗೆಸಿದ. ನಂತರದ ಎರಡ್ಮೂರು ದಿನಗಳು ಅವ ಕಾಣಿಸಿಲಿಲ್ಲ, ಅವನ ಮೊಬೈಲ್ ಬಂದ್ ಆಗಿತ್ತು. ಒಂದು ವಾರದ ನಂತರ ಸ್ಥಳೀಯ ಪತ್ರಿಕೆಗಳಲ್ಲಿ ಇವರಿಬ್ಬರೂ ಮದುವೆಯಾಗಿದ್ದಾರೆ ಎನ್ನುವ ಸುದ್ದಿ ಚಿತ್ರದ ಸಮೇತ ಪ್ರಕಟವಾಗಿತ್ತು. ನಮ್ಮೆಲ್ಲರಿಗೂ ಇದರಿಂದಾದ ಆಘಾತ ಮತ್ತು ಹಿಂಸೆ ಅಷ್ಟಿಷ್ಟಲ್ಲ. ಈ ಮದುವೆಯ ನಾಟಕದಲ್ಲಿ ಕೋಮು ವಿಷಯವು ಎದ್ದು ಕಾಣಿಸಿಕೊಂಡಿತು(ನಾವು ಅವನ ಕೋಮಿಗೆ ಸೇರಿದವರಲ್ಲ). ಟಿವಿಯವರು ನಮ್ಮ ಹಿಂದೆ ಬಿದ್ದಿದ್ದರು, ಪುಣ್ಯವಶಾತ್ ಅದು ಪ್ರಸಾರಕ್ಕೆ ಬರಲಿಲ್ಲ. ಆಗಿನಿಂದ ಅವಳನ್ನು ಮನೆಯಿಂದ ಹೊರಕಳುಹಿಸುವುದಕ್ಕೆ ಭಯವಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ಕ್ರಮ ಮುಂದುವರೆದಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಮಗಳನ್ನೂ ದೂಷಿಸುವರೇ ಹೆಚ್ಚಾಗಿದ್ದಾರೆ.. ಎರಡು ಕೈ ಜೊಡಿಸಿದರೆ ಚಪ್ಪಾಳೆ; ಅವಳೇಕೆ ಒಪ್ಪಿಗೆ ಕೊಟ್ಟಳು? ಹಿರಿಯರಿಗೆ/ಹಿತೈಷಿಗಳಿಗೇಕೆ ಹೇಳಲಿಲ್ಲ? ಇತ್ಯಾದಿ. ಇದೀಗ ನಮ್ಮ ಹುಡುಗಿಯನ್ನು ಮದುವೆಯಾಗಲು ಅವಳ ಕಾಲೇಜಿನ ಹಿರಿಯ ವಿದ್ಯಾರ್ಥಿಯೊಬ್ಬ ಪ್ರಸ್ತಾಪ ಮಾಡಿದ್ದಾನೆ. ಅವಳ ಮಾನಸಿಕ ಸ್ಥಿತಿಗತಿಗಳ ಬಗ್ಗೆ ತುಂಬಾ ಆತಂಕವಾಗಿರುವ ಈ ಸಮಯದಲ್ಲಿ ಮದುವೆಗೆ ಸಮ್ಮತಿಸ ಬೇಕೆ, ಬೇಡವೆ ಎನ್ನುವುದು ತಿಳಿಯುತ್ತಿಲ್ಲ. ಸಲಹೆ ನೀಡಿ.

–ದಿವ್ಯಾ ಮಣಿ, ಸೇಲಂ

ಬಹಳ ನೋವು ಉಂಟುಮಾಡುವ ಸಂಗತಿ ಇದು. ಯಾವ ತಪ್ಪನ್ನು ಮಾಡಿರದ ಹುಡುಗಿಯನ್ನು ಮನೆಯಲ್ಲಿಯೇ ಇರುವಂತೆ ಮಾಡುವುದು ಮತ್ತಷ್ಟು ಬೇಸರ ಉಂಟುಮಾಡುವಂತಹದ್ದು. ಅವಳ ಶಿಕ್ಷಣ ಮುಂದುವರೆಯಲಿ. ಉನ್ನತ ವ್ಯಾಸಂಗ ಮತ್ತು ವೃತ್ತಿ ಬದುಕಿನತ್ತ ಅವಳ ಮನಸ್ಸು ಹರಿಯುವಂತೆ ಮಾಡುವುದೇ ಸರಿಯಾದ ಕ್ರಮ. ಹೆಣ್ಣುಮಕ್ಕಳ ಸ್ವಾಭಿಮಾನ, ಸಾಧನೆಯನ್ನು ಸಹಿಸದ ನಯವಂಚಕರು ಎಲ್ಲಡೆ ಇದ್ದಾರೆ. ಅವರಿಗೆ ಹೆದರಿ ಬದುಕುವುದು ಸರಿ ಅಲ್ಲ. ಹಿರಿಯ ವಯಸ್ಸಿನ ಈ ವ್ಯಕ್ತಿಯ ಚಟುವಟಿಕೆ ಮತ್ತು ಮನದ ಸ್ಥಿತಿಯನ್ನು ಗಮನಿಸದ ಕಾಲೇಜಿನವರಿಗೆ ಧಿಕ್ಕಾರ ಹೇಳಬೇಕು. ತಮ್ಮ ವಿದ್ಯಾರ್ಥಿಗಳ ಬಗ್ಗೆ ಅಸಹ್ಯವಾಗಿ ವರ್ತಿಸಿದವರ ಬಗ್ಗೆ ಕ್ರಮ ಜರುಗಿಸಿದಂತಹ ಶಿಕ್ಷಣ ಸಂಸ್ಥೆ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ವಿಫಲವಾಗಿದೆ ಎಂದೆನಿಸುತ್ತದೆ. ಶಿಕ್ಷಣ ಕೊಡುವ ಸಂಸ್ಥೆಗಳೇ ನೈತಿಕತೆಯನ್ನು ಕಳೆದುಕೊಂಡರೆ ಗತಿಯೇನು ಎಂದು ಪ್ರಶ್ನಿಸಬೇಕಾದ ಪ್ರಸಂಗವಿದು. ಅವಳ ಶಿಕ್ಷಣ ಮುಂದುವರೆಯುವುದಕ್ಕೆ ಎಲ್ಲಾ ಉತ್ತೇಜನ ಅವರಿಂದ ಬಂದಿದ್ದರೇ ಇಂತಹ ಕೆಟ್ಟ ಬೆಳವಣಿಗೆಗಳಿಗೆ ಒಂದು ತಡೆ ಒಡ್ಡಿದಂತಾಗುತ್ತದೆ. ಹೆಣ್ಣುಮಕ್ಕಳ ಶೀಲಕ್ಕೆ ಸಂಬಂಧಿಸಿದ ಚಿತ್ರಗಳು, ಹಾವಭಾವಗಳನ್ನು ವಿದ್ಯುನ್ಮಾನದ ಸಲಕರಣೆ ಮತ್ತು ಪ್ರಚಾರದ ಜಾಲಕ್ಕೆ ಒಪ್ಪಿಸುವುದಾಗಿ ಬೆದರಿಕೆ ಒಡ್ಡುವುದು ನೀಚತನ. ಇಂತಹ ಮಾತುಗಳಂತೂ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿಯೇ ಕೇಳಿಬರುತ್ತಿದೆ. ಈ ಮಾದರಿಯ ವರ್ತನೆಗಳಿಗೆ ಕಾರಣವೇನು ಮತ್ತು ಇದರಿಂದ ಅಮಾಯಕರು ಹೇಗೆ ದೂರವಿರಬೇಕು ಎನ್ನುವುದರ ಬಗ್ಗೆ ಒಂದೆರಡು ಮಾತು. ಮುಖ್ಯವಾಗಿ ಅಪರಿಚಿತ ವ್ಯಕ್ತಿ, ಆತ ಎಷ್ಟೇ ಪ್ರಖ್ಯಾತನಾಗಿದ್ದರೂ ಸರಿಯೇ, ನಂಬಲು ಅರ್ಹ ಎನ್ನುವ ಧೃಡ ಭಾವನೆ ಬರುವತನಕ ಅವನೊಂದಿಗಿನ ಸಂಪರ್ಕದಲ್ಲಿ ಸಂದೇಹವೇ ಪ್ರಧಾನವಾಗಿರಬೇಕು. ಅಪರಿಚಿತನ ಖ್ಯಾತಿ, ಧೋರಣೆ, ಸವಿನಯದ ಮಾತುಗಳಿಗೆ ಮಾರುಹೋಗುವುದು ಸಹಜ. ಆದುದರಿಂದಲೇ ಎಚ್ಚರಿಕೆ ಬೇಕು. ನಿಮ್ಮ ವೈಯಕ್ತಿಕ ವಿಷಯ, ಅಂತರಂಗವನ್ನು ಹಂಚಿಕೊಳ್ಳುವ ಅವಸರ ಅಪಾಯಕಾರಿ. ಅಂತಹವರ ನಡೆನುಡಿಗಳ ಬಗ್ಗೆ ಕೊಂಚ ಸಂಶಯ ಬಂದರೂ ಹಿರಿಯರು, ಆತ್ಮೀಯರೊಂದಿಗೆ ಹಂಚಿಕೊಳ್ಳುವುದೇ ಜಾಣತನ. ನಿಮ್ಮ ವಿದ್ಯುನ್ಮಾನ ಸಲಕರಣೆಗಳು, 'ಐ.ಡಿ, ಪಾಸ್ ವರ್ಡ್', ಮೊಬೈಲ್ ಸಂಭಾಷಣೆ ಮತ್ತು ಎಸ್‌ಎಂಎಸ್ ಬಗ್ಗೆ ಜಾಗರೂಕರಾಗಿ ದಷ್ಟು ಒಳ್ಳೆಯದು. ಹೊಸದಾಗಿ ಪರಿಚಿತರಾದ ವ್ಯಕ್ತಿಗಳೊಂದಿಗೆ ನೇರ ಸಂಭಾಷಣೆ ಮಾತ್ರ ಇರಿಸಿಕೊಳ್ಳಿ, ಅದೂ ಸಹ ಇತರರೊಂದಿಗೆ ಇದ್ದಾಗ ಮಾತ್ರ. ಅವರ ಹೊಗಳಿಕೆಯ ಮಾತು, ಅಥವಾ ಮೇಲಿಂದ ಮೇಲೆ ಕೆಣಕಿ ಆಡುವ ಮಾತುಗಳ ಬಗ್ಗೆ ನಿಗಾ ಇರಲಿ. ಇವೆಲ್ಲಾ ನಿಮ್ಮನ್ನು ಅಸಹಾಯಕರನ್ನಾಗಿಸುವ ಕಲೆ ಇದ್ದರೂ ಇರಬಹುದು. ಪ್ರೀತಿ ಪ್ರೇಮ, ಕಾಮದ ಬಗ್ಗೆ ಬೇಕಾಬಿಟ್ಟಿ ಮಾತುಗಳು ಬೇಡ, ಅವರಿಗೂ ಅವಕಾಶ ಕೊಡಬೇಡಿ. ಪತ್ರಕರ್ತರು, ಟಿವಿ ವಾಹಿನಿಯವರು ಪರಿಚಯವಿದ್ದಾರೆ, ಅದು ಮಾಡಿಸ್ತೀನಿ, ಈ ಪ್ರಶಸ್ತಿ ಕೊಡಿಸ್ತೀನಿ ಎನ್ನುವ ಮಾತುಗಳ ಕಡೆ ಗಮನ ಹರಿಸದಿರಿ. ಎಲ್ಲಕ್ಕಿಂತಲೂ ಮುಖ್ಯವಾಗಿ ಅಂತರ್ಜಾಲ, ಟಿವಿ ವಾಹನಿಗಳಲ್ಲಿ ನಿಮ್ಮ ಬಗ್ಗೆ ಅಪಪ್ರಚಾರ, ಅವಮಾನ ಎನ್ನುವಂತಹ ವಿಷಯಗಳ ಪ್ರಚಾರವಾಗುತ್ತದೆ ಎನ್ನುವುದನ್ನು ಉದಾಸೀನ ಮಾಡಿದಷ್ಟು ಒಳ್ಳೆಯದೇ. ನಿಮ್ಮ ನೈತಿಕಮಟ್ಟ ಉತ್ತಮವಾಗಿದ್ದಲ್ಲಿ ಇದರ ಬಗ್ಗೆ ಅಂಜಿಕೆ ಸಲ್ಲದು. ಸುಳ್ಳು ಪ್ರಚಾರ, ಇಲ್ಲಸಲ್ಲದ ವಿಷಯಗಳನ್ನು ಬಹಿರಂಗ ಮಾಡುವುದರಿಂದ ಮನಸ್ಸಿಗೆ ನೋವು ಖಂಡಿತ. ಆದರೆ, ಆ ಕಾರಣದಿಂದಲೇ ನಿಮ್ಮ ನೈತಿಕ ಪ್ರಜ್ಞೆಯನ್ನು ಕಳೆದು ಕೊಳ್ಳುವುದು ಬೇಡ. ನಿಮ್ಮ ಪೋಷಕರೊಂದಿಗೆ ಈ ಮಾದರಿಯ ವ್ಯಕ್ತಿಗಳ ಬಗ್ಗೆ ಮುಚ್ಚಿಡುವುದು ಬೇಡ. ಇಂತಹ ಅನೇಕ ಎಚ್ಚರಿಕೆಯ ಕ್ರಮಗಳು ನಿಮ್ಮ ಮನಸ್ಸಿಗೂ ಮೂಡಬಹುದು. ಅವುಗಳನ್ನು ಅನುಸರಿಸುವುದು ತಪ್ಪೇನಲ್ಲ. ಇದೆಲ್ಲದರ ಜೊತೆಗೆ ಇನ್ನೊಂದು ಮಾತೆಂದರೆ, ಅಂತರ್ಜಾಲದಲ್ಲಿ ಸುದ್ದಿ ಹರಡುತ್ತದೆ ಎನ್ನುವ ಆತಂಕದಿಂದ ನಿಮ್ಮ ಮಾನಸಿಕ ಶಕ್ತಿಗಳನ್ನು ಕಳೆದುಕೊಳ್ಳದಿರಿ. ನಿಮ್ಮ ಮಗಳನ್ನು ವಿವಾಹವಾಗಲು ಮುಂದೆ ಬಂದಿರುವ ವ್ಯಕ್ತಿಯ ಪೂರ್ವಾಪರ ತಿಳಿದುಕೊಳ್ಳಿ. ಮದುವೆಯ ಬಗ್ಗೆ ಅವಸರ ಬೇಡ. ನಿಮ್ಮ ಹುಡುಗಿಗೆ ಅದ್ಯಾವುದೋ ಕಳಂಕ ಅಂಟಿಕೊಂಡಿದೆ ಎನ್ನುವ ಭಾವನೆ, ಭಯ, ಆತಂಕ ಖಂಡಿತ ಸಲ್ಲದು.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್** 9880937122